2005–06ನೇ ಸಾಲಿನಲ್ಲಿ ಕೈಗೊಂಡ 74 ಕಾಮಗಾರಿಗಳಲ್ಲಿ 61 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಹಾಗೂ 13 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ

2006–07ನೇ ಸಾಲಿನಲ್ಲಿ ಕೈಗೊಂಡ ಒಟ್ಟು 513 ಕಾಮಗಾರಿಗಳಲ್ಲಿ 257 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ 256 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ

ಇ) 7 ಕಾಮಗಾರಿಗಳು ಕಳಪೆ ಮಟ್ಟದಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದು ಅವುಗಳನ್ನು ಕಿತ್ತು ಹಾಕಿ ಸಂಬಂಧಿಸಿದ ಗುತ್ತಿಗೆದಾರರಿಂದಲೇ ಸರಿಪಡಿಸಲು ಯೋಜನಾಧಿಕಾರಿಗಳಿಗೆ ಸೂಚಿಸಲಾಗಿದೆ

ಈ) ನ್ಯೂನತೆ ಕಂಡು ಬಂದ ಕಾಮಗಾರಿಗಳನ್ನು ನಿರ್ಮಾಣ ಹಂತದಲ್ಲಿಯೇ ಕಿತ್ತು ಹಾಕಿ ಸಂಬಂಧಿಸಿದ ಗುತ್ತಿಗೆದಾರರಿಂದಲೇ ಹಾಗೂ ಅವರ ವೆಚ್ಚದಲ್ಲಿಯೇ ಸರಿಪಡಿಸಲು ಕ್ರಮ ಕೈಗೊಳ್ಳಲಾಗಿರುವುದರಿಂದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ

ಉ) ಅಂತಹ ಯಾವುದೇ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಊ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

488(934) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿದೆ, (ಪೂರ್ಣ ವಿವರಗಳನ್ನು ಗ್ರಾಮಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು),

ಆ) ಈ ವೈಕಿ ವಿವಿಧ ಯೋಜನೆಗಳಲ್ಲಿ ಇಲ್ಲಿಯವರೆವಿಗೆ ನಿರ್ಮಿಸಿರುವ ಮನೆಗಳೆಷ್ಟು, ಎಷ್ಟು ಪ್ರಮಾಣದ ಗುರಿಯನ್ನು ಸಾಧಿಸಲಾಗಿದೆ, ಉಳಿದ ಮನೆಗಳನ್ನು ಎಷ್ಟು ಅವಧಿಯಲ್ಲಿ ನಿರ್ಮಿಸಲಾಗುವುದು,

ಇ) ಪ್ರಸಕ್ತ ಸಾಲಿನಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ನಿಗದಿಮಾಡಲಾಗಿತ್ತು, ಈ ಪೈಕಿ ಇಲ್ಲಿಯವರೆವಿಗೆ ಬಿಡುಗಡೆ ಮಾಡಿರುವ ಮತ್ತು ಖರ್ಚು ಮಾಡಿರುವ ಹಣದ ಮೊತ್ತವೆಷ್ಟು?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಗುರಿಯನ್ನು ನಿಗದಿಪಡಿಸಲಾಗಿದೆ ವಿವರಗಳು ಈ ಕೆಳಗಿನಂತಿದೆ

ಗ್ರಾಮೀಣ ಪ್ರದೇಶ

ಕ್ರಮ ಸಂಖ್ಯೆ	ಗ್ರಾಮಗಳ ಹೆಸರು	ಗ್ರಾಮೀಣ ಆಶ್ರಯ	ಇಂದಿರಾ ಆವಾಸ್
1	ರಾಣಾ ಕುಶನೂರ	60	–
2	ಹೆಡಗಾಮೂರ	60	–
3	ಧೂಪತ ಮಹಾಗಾಂವ್	60	–
4	ಲಾಧಾ	60	29
5	ಕೌರಾ (ಬಿ)	60	–
6	ಸಂತಪೂರ	60	–
7	ಜೋಜನಾ	60	–
8	ದಡಗಾಂವಾ (ಡಿ)	60	–
9	ಜಂಬಗಿ	60	–
10	ಚಿಕಲಿ (ಜೆ)	60	–
11	ಚಿಂತಾಕಿ	60	–
12	ನಾಗಮಾರವಳ್ಳಿ	60	–
13	ಸುಂದಾಳ್	60	–
14	ಬಾದಲಗಾಂವ್	60	–
15	ಟಕಲೂರಾ	60	–

ಕ್ರಮ ಸಂಖ್ಯೆ	ಗ್ರಾಮಗಳ ಹೆಸರು	ಗ್ರಾಮೀಣ ಆಶ್ರಯ	ಇಂದಿರಾ ಆವಾಸ್
16	ಏಕೆಂಬಾ	60	–
17	ಕೊರೆಕಲ್	60	–
18	ಬೆಳಕುಣಿ (ಸಿ)	60	–
19	ಮುಧೋಳ (ಬಿ)	60	–
20	ಚಾಂದೋರಿ	60	29
21	ಖೇಡ	60	–
22	ಸೊನಾಳಾ	60	29
23	ಕಮಲನಗರ	60	–
24	ಡಿಗ್ಗಿ	60	28
25	ಹೊಳೆಸಮುದ್ರ	60	–
26	ತೊರೆಣಾ	60	29
27	ಡೊಣಗಾಂವ್ (ಎಮ್)	60	–
28	ಮದನೂರ	60	29
29	ಬೆಳೆಕುಣಿ (ಭೋ)	60	–
30	ಮುರ್ಕಿ	60	–
31	ದಾಬಕಾ	60	–
32	ಹೊಕ್ರಣಾ	60	29
33	ಚಿಕಲಿ (ಯು)	**60**	–
34	ಚಿಮ್ಮಗಾಂವ್	60	29
35	ಭಂಡಾರ ಕುಮಟಾ	60	–
36	ಬೊಂತಿ	60	–
37	ಬಳತ (ಬಿ)	60	29

ಕ್ರಮ ಸಂಖ್ಯೆ	ಗ್ರಾಮಗಳ ಹೆಸರು	ಗ್ರಾಮೀಣ ಆಶ್ರಯ	ಇಂದಿರಾ ಆವಾಸ್
38	ಶೆಂಬೆಳ್ಳಿ	60	–
39	ಧುಪತಮಹಾಗಾಂವ	–	29
40	ದಾಪಕಾ (ಸಿ)	–	29
ಒಟ್ಟು		**2280**	**318**

ನಗರ ಪ್ರದೇಶ

ಬೀದರ್ ಜಿಲ್ಲೆಯ ಔರಾದ್ (ಬಿ) ಪಟ್ಟಣಕ್ಕೆ ನಗರ ಆಶ್ರಯ ಯೋಜನೆಯಡಿ 2005–2006ನೇ ಸಾಲಿನ 485 ಮನೆಗಳು ನಿರ್ಮಾಣ ಮಾಡಲು ಸರ್ಕಾರದಿಂದ ಗುರಿ ನೀಡಲಾಗಿದೆ

2006–2007ನೇ ಸಾಲಿನಲ್ಲಿ ಗುರಿ ನಿಗದಿಪಡಿಸಿರುವುದಿಲ್ಲ

ಔರಾದ್ ಪಟ್ಟಣದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಹೊಸದಾಗಿ ವಸತಿ ಯೋಜನೆ ಕೈಗೊಳ್ಳುವ ಉದ್ದೇಶದಿಂದ ಸರ್ವೆ ನಂ 3, 18/4, 18/5 ನಲ್ಲಿ ಒಟ್ಟು 20 ಎಕರೆ ಜಮೀನನ್ನು ಗುರುತಿಸಿದ್ದು ಖರೀದಿಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ ಈ ವಸತಿ ಯೋಜನೆಯಲ್ಲಿ ಸುಮಾರು 50 ಮನೆ ಹಾಗೂ 300 ನಿವೇಶನಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ

ಆ) **ಗ್ರಾಮೀಣ ಪ್ರದೇಶ**

2006–2007ನೇ ಸಾಲಿನ ಇಂದಿರಾ ಆವಾಸ್ ಮತ್ತು ಆಶ್ರಯ ಯೋಜನೆಯಡಿಯಲ್ಲಿನ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ

ನಗರ ಪ್ರದೇಶ

ಸದರಿ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣ ಮಾಡಲು ಸರ್ಕಾರದಿಂದ 2005–2006ನೇ ಸಾಲಿನಲ್ಲಿ 485 ಮನೆಗಳ ಗುರಿ ನೀಡಲಾಗಿ ಸರ್ಕಾರದಿಂದ ನಗರ ಆಶ್ರಯ ಸಮಿತಿ ರಚನೆಯಾಗಿರುವುದಿಲ್ಲ ಆದ್ದರಿಂದ ಫಲಾನುಭವಿಗಳ ಆಯ್ಕೆಯಾಗಿರುವುದಿಲ್ಲ

2005–2006ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ವಾಲ್ಮೀಕಿ ಆವಾಸ್ ಯೋಜನೆಯಡಿ 150 ಮನೆಗಳನ್ನು ತೆಗೆದುಕೊಳ್ಳಲಾಗಿದ್ದು, ಮನೆಗಳ ನಿರ್ಮಾಣ ಪ್ರಗತಿಯಲ್ಲಿದ್ದು ಆಗಸ್ಟ್ 2007ರ ಅಂತ್ಯಕ್ಕೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ

ಇ) **ಗ್ರಾಮೀಣ ಪ್ರದೇಶ**

ಆಶ್ರಯ ಯೋಜನೆಯಡಿಯಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಜಿಲ್ಲಾವಾರು ಯಾವುದೇ ಆರ್ಥಿಕ ಗುರಿಯನ್ನು ನಿಗದಿಪಡಿಸಿರುವುದಿಲ್ಲ ಆದರೆ ಪ್ರಗತಿಯ ಆಧಾರದ ಮೇಲೆ ಅನುದಾನವನ್ನು ನೇರವಾಗಿ ನಿಗಮದಿಂದ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗುತ್ತದೆ ಸದರಿ ಹಣವನ್ನು ಗ್ರಾಮ ಪಂಚಾಯತಿಯಿಂದ ಫಲಾನುಭವಿಗಳಿಗೆ ಚೆಕ್ ಮೂಲಕ ಬಿಡುಗಡೆ ಮಾಡಲಾಗುತ್ತದೆ

ಪ್ರಸಕ್ತ ಸಾಲಿನಲ್ಲಿ ಗ್ರಾಮೀಣ ಆಶ್ರಯ ಯೋಜನೆಯಲ್ಲಿ ಬೀದರ್ ಜಿಲ್ಲೆ ಒಟ್ಟು 2280 ಮನೆಗಳಿಗೆ ಪ್ರತಿ ಮನೆಗೆ ರೂ 20000 ದಂತೆ ರೂ 456 ಲಕ್ಷ ಅನುದಾನ ನಿಗದಿಯಾಗಿದೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯು ಈಗಾಗಲೇ ಪ್ರಾರಂಭವಾಗಿದ್ದು, ಈ ಪ್ರಕ್ರಿಯೆ ಮುಗಿದ ಕೂಡಲೇ ಈ ಎಲ್ಲಾ ಮನೆಗಳಿಗೆ ಪ್ರಥಮ ಕಂತಿನ ಅನುದಾನವನ್ನು ಬಿಡುಗಡೆ ಮಾಡಲಾಗುವುದು ತದನಂತರ ಹಂತ ಹಂತವಾಗಿ ಪ್ರಗತಿ ಆಧಾರದ ಉಳಿದ ಅನುದಾನವನ್ನು ಬಿಡುಗಡೆ ಮಾಡಲಾಗುವುದು

489(935) ಶ್ರೀ ಗುರುವಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಎಷ್ಟು ಕಿ ಮೀ ರಸ್ತೆಗಳು ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಗೆ ಬರುತ್ತವೆ, (ವಿವಿಧ ಜಿಲ್ಲೆಗಳಲ್ಲಿ ಬರುವ ರಸ್ತೆಗಳ ಬಗ್ಗೆ ವಿವರಗಳನ್ನು ಒದಗಿಸುವುದು)

ಆ) ಪ್ರಸಕ್ತ ಸಾಲಿನಲ್ಲಿ ಈ ರಸ್ತೆಗಳ ನಿರ್ವಹಣೆ ಮತ್ತು ದುರಸ್ತಿಗಾಗಿ ನಿಗದಿ ಮಾಡಿದ್ದ ಹಣವೆಷ್ಟು, ಇದುವರೆಗೂ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಎಷ್ಟು ಹಣ ಖರ್ಚಾಗಿದೆ, (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)